Date : 29-9-2015

# ದೇಶೀ ಮಾರುಕಟ್ಟೆಯಲ್ಲಿ ಗೋಡಂಬಿ ತಿರುಳು ಜೆ.ಎಚ್. ಮತ್ತು ಪ್ರೀಮಿಯಂ ಪೀಸ್‌ಗಳ ಲಭ್ಯತೆ ವಿರಳ

ದೀಪಾವಳಿ ಹಬ್ಬದ ಬಳಕೆಗಾಗಿ ಉತ್ತರ ಮತ್ತು ಪಶ್ಚಿಮ ಭಾರತದ ಭಾಗಗಳಿಂದ ಗೋಡಂಬಿ ತಿರುಳಿನ ಬೇಡಿಕೆ ಹೆಚ್ಚಳವಾಗಿದೆಯೆಂದು ಕೆಲವು ಮೂಲಗಳಿಂದ ತಿಳಿದು ಬಂದಿದೆ. ಗೋಡಂಬಿ ತಿರುಳು ಉತ್ಪಾದನೆ ಸಾಮಾನ್ಯ ಪ್ರಮಾಣದಲ್ಲೇ ಇದ್ದರೂ, ಇಳಿಕೆಯಾಗದಿದ್ದರೂ ಜಂಬೋ ಸ್ಪ್ಲಿಟ್ಸ್ ಮತ್ತು ಪ್ರೀಮಿಯಂ ಪೀಸ್‌ಗಳು ಮಾರುಕಟ್ಟೆಯಲ್ಲಿ ಬೇಡಿಕೆಗೆ ತಕ್ಕಷ್ಟು ದೊರೆಯುತ್ತಿಲ್ಲವೆನ್ನಲಾಗಿದ್ದು ಅವುಗಳ ದರ ಹೆಚ್ಚಳವಾಗುತ್ತಿವೆ. ಮೇಲ್ದರ್ಜೆಯ ಗ್ರೇಡ್‌ಗಳಾದ **W180, W210** ಮತ್ತು **W240** ಗ್ರೇಡ್‌ಗಳೂ ದೊಡ್ಡ ಪ್ರಮಾಣದಲ್ಲಿ ಮಾರುಕಟ್ಟೆಯಲ್ಲಿ ದೊರೆಯುತ್ತಿಲ್ಲವೆನ್ನಲಾಗಿದೆ. **JH** ಗ್ರೇಡ್ ಮಂಗಳೂರು ಮತ್ತು ಗೋವಾ ಮಾರುಕಟ್ಟೆಗಳಲ್ಲಿ **11.340** ಕೆ.ಜಿ.ಯ ಟನ್‌ಗೆ ರೂ.**7200** ಕ್ಕೆ ಮಾರಾಟವಾಗುತ್ತಿದೆಯೆನ್ನಲಾಗಿದೆ. ದರ ಹೆಚ್ಚಳವಾಗುತ್ತಿದ್ದರೂ ಈಗಲೂ ಕೈಗಾರಿಕಾ ವಲಯದ ವೆಚ್ಚಗಳನ್ನು ಸರಿದೂಗಿಸುವಷ್ಟು ಹೆಚ್ಚಳವಾಗಿಲ್ಲವೆನ್ನಲಾಗಿದೆ.

quickmarketreports.com